# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, **ಶನಿವಾರ**, ೦೩, ಅಕ್ಟೋಬರ್, ೨೦೨೬ (ಆಶ್ವಯುಜ , ೧೧, ಶಕವರ್ಷ, ೧೯೪೮)<br>BENGALURU, SATURDAY, 03, OCTOBER, 2026 (AASHWAYUJA , 11, SHAKAVARSHA, 1948) | ನಂ. ೧೦೫೦<br>No. 1050 |


## GOVERNMENT OF KARNATAKA

No:DPAR 295 SRR 2023

Karnataka Government Secretariat,
Vidhana Soudha,
Dr|| B. R. Ambedkar Veedhi,
Bengaluru,Dated: 03.10.2026

## NOTIFICATION

The draft of the following rules further to amend the Karnataka Civil Services (General Recruitment) Rules, 1977, which the Government of Karnataka proposes to make in exercise of the powers conferred by sub-section (1) of section 3, read with section 8 of the Karnataka State Civil Services Act, 1978 (Karnataka Act 14 of 1990), was published as required by clause (a) of sub-section (2) of section 3 of the said Act, in Notification No: DPAR 295 SRR 2023 dated:22.05.2026, in Part-IV-A of the Karnataka Gazette dated:22.05.2026 inviting objections or suggestions from all the persons likely to be affected thereby within fifteen days from the date of its publication in the official Gazette.

whereas the said Gazette was made available to the public on 22.05.2026.



Scanned with OKEN Scanner

Whereas, the objections and suggestions received have been considered by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 Karnataka Act 14 of 1990), the Government of Karnataka hereby makes the following rules, namely:-

## RULES

**1. Title and commencement.-** (1) These rules may be called the Karnataka Civil Services (General Recruitment) (Amendment) Rules, 2026.

(2) They shall come into force from the date of their final publication in the Official Gazette.

**2. Amendment of rule 9.-** In the Karnataka Civil Services (General Recruitment) Rules, 1977 in rule 9, in sub-rule (1), for clause (1E), the following shall be substituted, namely:-

"(1E).(a) Save as otherwise provided in the rules of recruitment specially made or deemed to have been made under the Karnataka State Civil Services Act, 1978 (Karnataka Act 14 of 1990) in respect of any service or post in the civil services, in all direct recruitment two percent of the vacancies set apart for that method in each of the categories of General Merit, the Scheduled Castes, the Scheduled Tribes and Other Backward Classes shall, subject to any general instructions that may be issued by the Government regarding the manner of appointment, be filled from among the candidates, who are Sports Achievers.

**Explanation:** For the purpose of this sub-rule, 'Sports-Achiever' means, a person who is domiciled in Karnataka for at least ten years and who has participated in the sports or games specified in the table below at the National or International events either as an individual participant or a member of the team and represented Karnataka in at least one National Championship recognized by Ministry of Youth

Scanned with OKEN Scanner

Affairs and Sports, Government of India or at least one National Games even if he has represented other States or Organization like Railways.

| Sl. No. | Sports or Games | Sl. No. | Sports or Games |
|---|---|---|---|
| 1 | Aquatics (Swimming, Diving, Open Water Swimming and Water Polo) | 18 | Hockey |
| 2 | Archery | 19 | Judo |
| 3 | Athletics | 20 | Kabaddi |
| 4 | Badminton | 21 | Kayaking |
| 5 | Basketball | 22 | Kho-Kho |
| 6 | Billiards and Snookers | 23 | Netball |
| 7 | Boxing | 24 | Rowing |
| 8 | Canoeing | 25 | Shooting |
| 9 | Chess | 26 | Sports Climbing |
| 10 | Cricket | 27 | Squash |
| 11 | Cycling | 28 | Table Tennis |
| 12 | Equestrian | 29 | Taekwondo |
| 13 | Fencing | 30 | Tennis |
| 14 | Football | 31 | Triathlon |
| 15 | Golf | 32 | Volleyball |
| 16 | Gymnastics | 33 | Weight Lifting |
| 17 | Handball | 34 | Wrestling |

Provided that, if sufficient number of eligible sports achievers are not available, to the extent of two percent, the unfilled vacancies shall be filled by others belonging to the same category of vertical reservation.

(b) Subject to clauses (g) and (h) sports achievers shall be given Weightage Marks based on their achievement as specified in column (4) of the table below in respect of the corresponding event specified in column (2) provided their achievement is certified by the authority specified in column (3), below:-

Scanned with OKEN Scanner

| Sl. NO. | Sports Distinction or Participation | Certificate Issuing Authority | Weightage Marks |
|---|---|---|---|
| (1) | (2) | (3) | (4) |
| 1 | Gold Medal in Olympics or Paralympics only | International Olympic Committee (IOC) or International Paralympic Committee (IPC) | 50 |
| 2 | Silver Medal in Olympics or Paralympics only | International Olympic Committee (IOC) or International Paralympic Committee (IPC) | 49 |
| 3 | Bronze Medal in Olympics or Paralympics only | International Olympic Committee (IOC) or International Paralympic Committee (IPC) | 48 |
| 4 | Participation in Olympics or Paralympics only | International Olympic Committee (IOC) or International Paralympic Committee (IPC) and Indian Olympic Association or Paralympic Committee of India recognized by Ministry of Youth Affairs and Sports, Government of India. | 47 |
| 5 | Gold Medal in Asian Games or Asian Para Games only | Recognized by IOC and Olympic Council of Asia | 46 |
| 6 | Silver Medal in Asian Games or Asian Para Games only | Recognized by IOC and Olympic Council of Asia | 45 |
| 7 | Bronze Medal in Asian Games or Asian Para Games only | Recognized by IOC and Olympic Council of Asia | 44 |
| 8 | Gold Medal in Commonwealth Games only | Recognized by IOC and Commonwealth Games | 43 |
| 9 | Silver Medal in Commonwealth Games only | Recognized by IOC and Commonwealth Games | 42 |

Scanned with OKEN Scanner

| | | | |
|---|---|---|---|
| 10 | Bronze Medal in Commonwealth Games only | Recognized by IOC and Commonwealth Games | 41 |
| 11 | Participation in Asian Games only | International Olympic Committee and Olympic Council of Asia or Indian Olympic Association recognized by Government of India. | 40 |
| 12 | Participation in Commonwealth Games only | Commonwealth Games Federation and Indian Olympic Association or Paralympic Committee of India recognized by Government of India. | 39 |
| 13 | Gold Medal in World Cup or Para World Cup only | International Sports Federation or National Sports Federation recognized by Ministry of Youth Affairs and Sports, Government of India. | 38 |
| 14 | Silver Medal in World Cup or Para World Cup only | International Sports Federation or National Sports Federation recognized by Ministry of Youth Affairs and Sports, Government of India. | 37 |
| 15 | Bronze Medal in World Cup or Para World Cup only | International Sports Federation or National Sports Federation recognized by Ministry of Youth Affairs and Sports, Government of India. | 36 |
| 16 | Gold Medal in World Championship or Para World Championships only | International Sports Federation or National Sports Federation recognized by Ministry of Youth Affairs and Sports, Government of India. | 35 |

Scanned with OKEN Scanner

| | | | |
|---|---|---|---|
| 17 | Silver Medal in World Championship or Para World Championships only | International Sports Federation or National Sports Federation recognized by Ministry of Youth Affairs and Sports, Government of India. | 34 |
| 18 | Bronze Medal in World Championship or Para World Championships only | International Sports Federation or National Sports Federation recognized by Ministry of Youth Affairs and Sports, Government of India. | 33 |
| 19 | Gold Medal in Asian Championships only | Continental Confederation or International Sports Federation or National Sports Federations recognized by Ministry of Youth Affairs and Sports, Government of India. | 32 |
| 20 | Silver Medal in Asian Championships only | Continental Confederation or International Sports Federation or National Sports Federations recognized by Ministry of Youth Affairs and Sports, Government of India. | 31 |
| 21 | Bronze Medal in Asian Championships only | Continental Confederation or International Sports Federation or National Sports Federations recognized by Ministry of Youth Affairs and Sports, Government of India. | 30 |
| 22 | Gold Medal in Youth Olympics only | International Olympic Committee or Indian Olympic Association recognized by Ministry of Youth Affairs and Sports, Government of India. | 29 |

Scanned with OKEN Scanner

| | | | |
|---|---|---|---|
| 23 | Silver Medal in Youth Olympics only | International Olympic Committee or Indian Olympic Association recognized by Ministry of Youth Affairs and Sports, Government of India. | 28 |
| 24 | Bronze Medal in Youth Olympics only | International Olympic Committee or Indian Olympic Association recognized by Ministry of Youth Affairs and Sports, Government of India. | 27 |
| 25 | Gold Medal in World University Games only | International University Sports Federation (FISU) or Association of Indian Universities (AIU) recognized by Government of India. | 26 |
| 26 | Silver Medal in World University Games only | International University Sports Federation (FISU) or Association of Indian Universities (AIU) recognized by Government of India. | 25 |
| 27 | Bronze Medal in World University Games only | International University Sports Federation (FISU) or Association of Indian Universities (AIU) recognized by Government of India. | 24 |
| 28 | Gold Medal in S.A.F. Games only | South Asian Olympic Council or Indian Olympic Association recognized by Ministry of Youth Affairs and Sports, Government of India. | 23 |
| 29 | Silver Medal in S.A.F. Games only | South Asian Olympic Council or Indian Olympic Association recognized by Ministry of Youth Affairs and Sports, Government of India. | 22 |

Scanned with OKEN Scanner

| | | | |
|---|---|---|---|
| 30 | Bronze Medal in S.A.F. Games only | South Asian Olympic Council or Indian Olympic Association recognized by Ministry of Youth Affairs and Sports, Government of India. | 21 |
| 31 | Gold Medal in National Games only | Indian Olympic Association or National Sports Federation recognized by Ministry of Youth Affairs and Sports, Government of India. | 20 |
| 32 | Silver Medal in National Games only | Indian Olympic Association or National Sports Federation recognized by Ministry of Youth Affairs and Sports, Government of India. | 19 |
| 33 | Bronze Medal in National Games only | Indian Olympic Association or National Sports Federation recognized by Ministry of Youth Affairs and Sports, Government of India. | 18 |
| 34 | Gold Medal in Senior (Men & Women) National Championship only | National Sports Federation recognized by Ministry of Youth Affairs and Sports, Government of India. | 17 |
| 35 | Silver Medal in Senior (Men & Women) National Championship only | National Sports Federation recognized by Ministry of Youth Affairs and Sports, Government of India. | 16 |
| 36 | Bronze Medal in Senior (Men & Women) National Championship only | National Sports Federation recognized by Ministry of Youth Affairs and Sports, Government of India. | 15 |
| 37 | Gold Medal in Khelo India University Games or All India Inter-University Meet or Championship only | Association of Indian Universities recognized by Government of India. | 14 |

Scanned with OKEN Scanner

| | | | |
|---|---|---|---|
| 38 | Silver Medal in Khelo India University Games or All India Inter-University Meet or Championship only | Association of Indian Universities recognized by Government of India. | 13 |
| 39 | Bronze Medal in Khelo India University Games or All India Inter-University Meet or Championship only | Association of Indian Universities recognized by Government of India. | 12 |

(c) Nothing in this sub-rule shall prevent the Sports Achievers from seeking recruitment under any other rules.

(d) In case a winner of medal in the Olympics or Paralympics or Asian Games or Asian Para Games or Commonwealth Games is not recruited under the Karnataka State Civil Services (Recruitment of Persons awarded with medals at Olympics or Paralympics or Asian Games or Asian Para Games or Commonwealth Games to Certain Posts) (Special) Rules 2023, he may seek recruitment under this sub rule.

(e) A sports achiever shall be considered for recruitment to a post under this sub-rule provided he possesses the minimum qualification prescribed for recruitment to such a post in the rules of recruitment of the service or department concerned.

(f) In case a sports achiever has more than one achievement specified in column (2) of the table in clause (b) to his credit, the weightage marks secured by him in his highest achievement shall be considered.

(g) In case selection to a post is required to be made on the basis of marks secured in a competitive examination as per the rules of recruitment applicable to it, a total of 50% of marks secured in the written examination and the absolute marks available to him under clause (b) shall be taken into account for determining his relative merit among the candidates under 2% sports quota.

Scanned with OKEN Scanner

(h) In case selection to a post is required to be made on the basis of marks secured in the examination relating to the minimum educational qualification prescribed for recruitment as per the rules of recruitment applicable to it, a total of 50% of the marks secured by the sports achiever in the examination and the absolute marks available to him under clause (b) shall be taken into account for determining his relative merit among the candidates under 2% sports quota.

(i) In case of Persons with Disabilities Candidates, 2% reservation under sports quota is limited to posts identified by the expert committee to identify posts to be reserved for the Persons with Disabilities constituted under Section 33 of The Rights of Persons with Disabilities (RPwD) Act, 2016

(j) General instructions may be issued by Government in the Department of Youth Empowerment and Sports for an effective implementation of this sub-rule.

(k) In case the appointing authority concerned has any doubt or difficulty, it may consult the Commissioner, Department of Youth Empowerment and Sports.

(l) The Commissioner, Department of Youth Empowerment and Sports shall confirm the authenticity of the certificates produced by the sports achievers relating to their achievements, if referred by the appointing authority.

(m) In case candidates have secured equal marks, those who have achievement in events requiring participation of an individual person shall be given priority over those whose achievement is in team events.

By Order and in the name of the
Governor of Karnataka

(Ashakumari A. J.)
Under Secretary to Government,
Department of Personnel &
Administrative Reforms
(Service Rules-1)

Scanned with OKEN Scanner

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 295 ಸೇನಿನಿ 2023

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ|| ಬಿ. ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ: 03.10.2026

## ಅಧಿಸೂಚನೆ

ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಪ್ರಸ್ತಾಪಿಸಿರುವ ಈ ಕೆಳಗಿನ ನಿಯಮಗಳ ಕರಡನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಕಾಯ್ದೆ, 1978 ರ (1990 ರ ಕರ್ನಾಟಕ ಕಾಯ್ದೆ 14) 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ-ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸದರಿ ಕಾಯ್ದೆಯ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯವಿರುವಂತೆ ಅಧಿಸೂಚನೆ ಸಂಖ್ಯೆ: ಸಿಆಸುಇ 295 ಸೇನೆನಿ 2023 ದಿನಾಂಕ: 22.05.2026 ರಲ್ಲಿ, ದಿನಾಂಕ:22.05.2026 ರ ಕರ್ನಾಟಕ ರಾಜ್ಯ ಪತ್ರದ ಭಾಗ-IV-A ರಲ್ಲಿ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಅಹ್ವಾನಿಸಲಾಗಿರುವುದರಿಂದ,

ಸದರಿ ರಾಜ್ಯಪತ್ರವನ್ನು ದಿನಾಂಕ:22.05.2026ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿರುವುದರಿಂದ,

ಮತ್ತು ಸದರಿ ಕರುಡಿನ ಬಗ್ಗೆ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗಿದ್ದು ಅವುಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ ;

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಅಧಿನಿಯಮಸಂಖ್ಯೆ: 14) ರ 3ನೇ ಪ್ರಕರಣದ 1ನೇ ಉಪಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

Scanned with OKEN Scanner

**2**. **ನಿಯಮ 9ಕ್ಕೆ ತಿದ್ದುಪಡಿ.-** ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 9 ರಲ್ಲಿ, ಉಪ-ನಿಯಮ (1) ರಲ್ಲಿ, ಖಂಡ (1E) ಗೆ ಬದಲಾಗಿ, ಈ ಕೆಳಗಿನವುಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:-

"(1ಇ).(ಎ) ಸಿವಿಲ್ ಸೇವೆಗಳಲ್ಲಿನ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಕಾಯ್ದೆ, 1978 ರ (1990 ರ ಕರ್ನಾಟಕ ಕಾಯ್ದೆ 14) ಅಡಿಯಲ್ಲಿ ವಿಶೇಷವಾಗಿ ರಚಿಸಲಾದ ಅಥವಾ ರಚಿಸಲಾಗಿದೆ ಎಂದು ಪರಿಗಣಿಸಲಾದ ನೇಮಕಾತಿ ನಿಯಮಗಳಲ್ಲಿ ಅನ್ಯಥಾ ಒದಗಿಸಿರುವುದನ್ನು ಹೊರತುಪಡಿಸಿ, ಎಲ್ಲಾ ನೇರ ನೇಮಕಾತಿಯಲ್ಲಿ, ನೇಮಕಾತಿಯ ವಿಧಾನದ ಕುರಿತು ಸರ್ಕಾರವು ಹೊರಡಿಸಬಹುದಾದ ಯಾವುದೇ ಸಾಮಾನ್ಯ ಸೂಚನೆಗಳಿಗೆ ಒಳಪಟ್ಟು, ಆ ವಿಧಾನಕ್ಕಾಗಿ ಮೀಸಲಿಡಲಾದ ಶೇಕಡಾ ಎರಡರಷ್ಟು ಖಾಲಿ ಹುದ್ದೆಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಗಳಲ್ಲಿ, ಕ್ರೀಡಾ ಸಾಧಕರಾಗಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

**ವಿವರಣೆ:** ಈ ಉಪ-ನಿಯಮದ ಉದ್ದೇಶಕ್ಕಾಗಿ **"ಕ್ರೀಡಾ-ಸಾಧಕ"** ಎಂದರೆ, ಕನಿಷ್ಟ ಹತ್ತು ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಮತ್ತು ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಕ್ರೀಡೆಗಳು ಅಥವಾ ಆಟಗಳಲ್ಲಿ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ವೈಯಕ್ತಿಕವಾಗಿ ಅಥವಾ ತಂಡದ ಸದಸ್ಯರಾಗಿ ಭಾಗವಹಿಸಿ, ಕರ್ನಾಟಕವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಅಥವಾ ಇತರೆ ರಾಜ್ಯ ಅಥವಾ ಭಾರತೀಯ ರೈಲ್ವೆಯಂತಹ ಸಂಸ್ಥೆಗಳನ್ನು ಪ್ರತಿನಿಧಿಸಿದ್ದಲ್ಲಿ, ಕನಿಷ್ಟ ಒಂದು ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ (recognized) ರಾಷ್ಟ್ರೀಯ ಚಾಂಪಿಯನ್‌ಶಿಪ್ (National Championship) ಅಥವಾ ಕನಿಷ್ಟ ಒಂದು ರಾಷ್ಟ್ರೀಯ ಕ್ರೀಡಾಕೂಟ(National Games)ದಲ್ಲಿ ಕರ್ನಾಟಕ ರಾಜ್ಯವನ್ನು ಕಡ್ಡಾಯವಾಗಿ ಪ್ರತಿನಿಧಿಸಿದ ಕ್ರೀಡಾಪಟುಗಳು ಮಾತ್ರ'

| ಕ್ರ.ಸಂ | ಕ್ರೀಡೆಗಳು/ಆಟಗಳ ಹೆಸರು | ಕ್ರ.ಸಂ | ಕ್ರೀಡೆಗಳು/ಆಟಗಳ ಹೆಸರು |
|---|---|---|---|
| 1 | ಜಲ ಕ್ರೀಡೆಗಳು (ಈಜು, ಡೈವಿಂಗ್, ತೆರೆದ ನೀರಿನ ಈಜು ಮತ್ತು ವಾಟರ್ ಪೋಲೋ) | 18 | ಹಾಕಿ |
| 2 | ಆರ್ಚರಿ | 19 | ಜುಡೋ |
| 3 | ಅಥ್ಲೆಟಿಕ್ಸ್ | 20 | ಕಬಡ್ಡಿ |
| 4 | ಬ್ಯಾಡ್ಮಿಂಟನ್ | 21 | ಕಯಾಕಿಂಗ್ |
| 5 | ಬಾಸ್ಕೆಟ್ ಬಾಲ್ | 22 | ಖೋ-ಖೋ |
| 6 | ಬಿಲಿಯರ್ಡ್ಸ್ ಮತ್ತು ಸ್ನೂಕರ್ | 23 | ನೆಟ್‌ಬಾಲ್ |
| 7 | ಬಾಕ್ಸಿಂಗ್ | 24 | ರೋಯಿಂಗ್ |
| 8 | ಕ್ಯಾನೋಯಿಂಗ್ | 25 | ಶೂಟಿಂಗ್ |

Scanned with OKEN Scanner

| | | | |
|---|---|---|---|
| 9 | ಚೆಸ್ | 26 | ಸ್ಪೋರ್ಟ್ಸ್ ಕ್ಲೈಂಬಿಂಗ್ |
| 10 | ಕ್ರಿಕೆಟ್ | 27 | ಸ್ಕ್ವಾಷ್ |
| 11 | ಸೈಕ್ಲಿಂಗ್ | 28 | ಟೇಬಲ್ ಟೆನ್ನಿಸ್ |
| 12 | ಈಕ್ವೆಸ್ಟ್ರಿಯನ್ | 29 | ಟೈಕ್ವಾಂಡೋ |
| 13 | ಫೆನ್ಸಿಂಗ್ | 30 | ಟೆನ್ನಿಸ್ |
| 14 | ಫುಟ್ಬಾಲ್ | 31 | ಟ್ರೈಥ್ಲಾನ್ |
| 15 | ಗಾಲ್ಫ್ | 32 | ವಾಲಿಬಾಲ್ |
| 16 | ಜಿಮ್ನಾಸ್ಟಿಕ್ಸ್ | 33 | ಭಾರ ಎತ್ತುವಿಕೆ |
| 17 | ಹ್ಯಾಂಡ್‌ಬಾಲ್ | 34 | ಕುಸ್ತಿ |

ಪರಂತು, ಶೇಕಡಾ ಎರಡರಷ್ಟು ಮೀಸಲಾತಿಗೆ ಸಾಕಷ್ಟು ಸಂಖ್ಯೆಯ ಅರ್ಹ ಕ್ರೀಡಾ ಸಾಧಕರು ಲಭ್ಯವಿಲ್ಲದಿದ್ದರೆ, ಭರ್ತಿಯಾಗದ ಖಾಲಿ ಹುದ್ದೆಗಳನ್ನು ಲಂಬ ಮೀಸಲಾತಿಯ ಅದೇ ಪ್ರವರ್ಗಕ್ಕೆ ಸೇರಿದ ಇತರರಿಂದ ಭರ್ತಿ ಮಾಡತಕ್ಕದ್ದು.

(ಬಿ) ಖಂಡಿಕೆ (ಜಿ) ಮತ್ತು (ಹೆಚ್)ಗಳಿಗೆ ಒಳಪಟ್ಟಂತೆ, ಕ್ರೀಡಾ ಸಾಧಕರಿಗೆ ಅವರ ಸಾಧನೆಗೆ ಅನುಗುಣವಾಗಿ ಕೆಳಗಿನ ಪಟ್ಟಿಯ ಕಾಲಂ (2)ರಲ್ಲಿ ಸೂಚಿಸಿರುವ ಸಂಬಂಧಿತ ಸ್ಪರ್ಧೆಗೆ, ಕಾಲಂ (3)ರಲ್ಲಿ ಸೂಚಿಸಿರುವ ಪ್ರಾಧಿಕಾರದಿಂದ ಪ್ರಮಾಣೀಕರಿಸಲ್ಪಟ್ಟಿದ್ದಲ್ಲಿ, ಕಾಲಂ (4)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಕೃಪಾಂಕಗಳನ್ನು (Weightage Marks) ನೀಡತಕ್ಕದ್ದು:-

| **ಕ್ರ. ಸಂ** | **ಕ್ರೀಡಾ ಸಾಧನೆ / ಭಾಗವಹಿಸುವಿಕೆ** | **ಪ್ರಮಾಣಪತ್ರ ನೀಡುವ ಪ್ರಾಧಿಕಾರ** | **ಕೃಪಾಂಕ (Weightage Marks)** |
|---|---|---|---|
| **(1)** | **(2)** | **(3)** | **(4)** |
| 1 | ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ನಲ್ಲಿ ಚಿನ್ನದ ಪದಕ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (IOC) ಅಥವಾ ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (IPC) | 50 |
| 2 | ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (IOC) ಅಥವಾ ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (IPC) | 49 |
| 3 | ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ನಲ್ಲಿ ಕಂಚಿನ ಪದಕ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (IOC) ಅಥವಾ ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (IPC) | 48 |

Scanned with OKEN Scanner

| | | | |
|---|---|---|---|
| 4 | ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ನಲ್ಲಿ ಭಾಗವಹಿಸುವಿಕೆ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (IOC) ಅಥವಾ ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (IPC) ಹಾಗೂ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ ಅಥವಾ ಭಾರತೀಯ ಪ್ಯಾರಾಲಿಂಪಿಕ್ ಸಮಿತಿ | 47 |
| 5 | ಏಷ್ಯನ್ ಗೇಮ್ಸ್ ಅಥವಾ ಏಷ್ಯನ್ ಪ್ಯಾರಾ ಗೇಮ್ಸ್ ನಲ್ಲಿ ಚಿನ್ನದ ಪದಕ ಮಾತ್ರ | IOC ಮತ್ತು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾದಿಂದ ಮಾನ್ಯತೆ ಪಡೆದ | 46 |
| 6 | ಏಷ್ಯನ್ ಗೇಮ್ಸ್ ಅಥವಾ ಏಷ್ಯನ್ ಪ್ಯಾರಾ ಗೇಮ್ಸ್ ನಲ್ಲಿ ಬೆಳ್ಳಿ ಪದಕ ಮಾತ್ರ | IOC ಮತ್ತು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾದಿಂದ ಮಾನ್ಯತೆ ಪಡೆದ | 45 |
| 7 | ಏಷ್ಯನ್ ಗೇಮ್ಸ್ ಅಥವಾ ಏಷ್ಯನ್ ಪ್ಯಾರಾ ಗೇಮ್ಸ್ ನಲ್ಲಿ ಕಂಚಿನ ಪದಕ ಮಾತ್ರ | IOC ಮತ್ತು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾದಿಂದ ಮಾನ್ಯತೆ ಪಡೆದ | 44 |
| 8 | ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಮಾತ್ರ | IOC ಮತ್ತು ಕಾಮನ್‌ವೆಲ್ತ್ ಗೇಮ್ಸ್ ನಿಂದ ಮಾನ್ಯತೆ ಪಡೆದ | 43 |
| 9 | ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಮಾತ್ರ | IOC ಮತ್ತು ಕಾಮನ್‌ವೆಲ್ತ್ ಗೇಮ್ಸ್ ನಿಂದ ಮಾನ್ಯತೆ ಪಡೆದ | 42 |
| 10 | ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಮಾತ್ರ | IOC ಮತ್ತು ಕಾಮನ್‌ವೆಲ್ತ್ ಗೇಮ್ಸ್ ನಿಂದ ಮಾನ್ಯತೆ ಪಡೆದ | 41 |
| 11 | ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವಿಕೆ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ ಅಥವಾ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ | 40 |
| 12 | ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ ಮಾತ್ರ | ಕಾಮನ್‌ವೆಲ್ತ್ ಗೇಮ್ಸ್ ಫೆಡರೇಶನ್ ಹಾಗೂ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ<br>ಭಾರತೀಯ ಒಲಿಂಪಿಕ್ ಸಂಘ ಅಥವಾ ಭಾರತೀಯ ಪ್ಯಾರಾಲಿಂಪಿಕ್ ಸಮಿತಿ | 39 |

Scanned with OKEN Scanner

| | | | |
|---|---|---|---|
| 13 | ವಿಶ್ವಕಪ್ ಅಥವಾ ಪ್ಯಾರಾ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಮಾತ್ರ | ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 38 |
| 14 | ವಿಶ್ವಕಪ್ ಅಥವಾ ಪ್ಯಾರಾ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಮಾತ್ರ | ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 37 |
| 15 | ವಿಶ್ವಕಪ್ ಅಥವಾ ಪ್ಯಾರಾ ವಿಶ್ವಕಪ್‌ನಲ್ಲಿ ಕಂಚಿನ ಪದಕ ಮಾತ್ರ | ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 36 |
| 16 | ವಿಶ್ವ ಚಾಂಪಿಯನ್‌ಶಿಪ್ ಅಥವಾ ಪ್ಯಾರಾ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಮಾತ್ರ | ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 35 |
| 17 | ವಿಶ್ವ ಚಾಂಪಿಯನ್‌ಶಿಪ್ ಅಥವಾ ಪ್ಯಾರಾ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಮಾತ್ರ | ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 34 |
| 18 | ವಿಶ್ವ ಚಾಂಪಿಯನ್‌ಶಿಪ್ ಅಥವಾ ಪ್ಯಾರಾ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಮಾತ್ರ | ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 33 |
| 19 | ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಮಾತ್ರ | ಖಂಡೀಯ ಒಕ್ಕೂಟ ಅಥವಾ ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 32 |

Scanned with OKEN Scanner

| | | | |
|---|---|---|---|
| 20 | ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಮಾತ್ರ | ಖಂಡೀಯ ಒಕ್ಕೂಟ ಅಥವಾ ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 31 |
| 21 | ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಮಾತ್ರ | ಖಂಡೀಯ ಒಕ್ಕೂಟ ಅಥವಾ ಅಂತರರಾಷ್ಟ್ರೀಯ ಕ್ರೀಡಾ ಫೆಡರೇಶನ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 30 |
| 22 | ಯೂತ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ | 29 |
| 23 | ಯೂತ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ. | 28 |
| 24 | ಯೂತ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಮಾತ್ರ | ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ | 27 |
| 25 | ವಿಶ್ವ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಮಾತ್ರ | ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ಕ್ರೀಡಾ ಫೆಡರೇಶನ್ (FISU) ಅಥವಾ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ(AIU) | 26 |
| 26 | ವಿಶ್ವ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಮಾತ್ರ | ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ಕ್ರೀಡಾ ಫೆಡರೇಶನ್ (FISU) ಅಥವಾ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ (AIU) | 25 |

Scanned with OKEN Scanner

| | | | |
|---|---|---|---|
| 27 | ವಿಶ್ವ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಕಂಚಿನ ಪದಕ ಮಾತ್ರ | ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ಕ್ರೀಡಾ ಫೆಡರೇಶನ್ (FISU) ಅಥವಾ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ (AIU) | 24 |
| 28 | ಎಸ್.ಎ.ಎಫ್. ಕ್ರೀಡಾಕೂಟದಲ್ಲಿ ಚಿನ್ನದ ಪದಕ ಮಾತ್ರ | ದಕ್ಷಿಣ ಏಷ್ಯನ್ ಒಲಿಂಪಿಕ್ ಕೌನ್ಸಿಲ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ | 23 |
| 29 | ಎಸ್.ಎ.ಎಫ್. ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಮಾತ್ರ | ದಕ್ಷಿಣ ಏಷ್ಯನ್ ಒಲಿಂಪಿಕ್ ಕೌನ್ಸಿಲ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ | 22 |
| 30 | ಎಸ್.ಎ.ಎಫ್. ಕ್ರೀಡಾಕೂಟದಲ್ಲಿ ಕಂಚಿನ ಪದಕ ಮಾತ್ರ | ದಕ್ಷಿಣ ಏಷ್ಯನ್ ಒಲಿಂಪಿಕ್ ಕೌನ್ಸಿಲ್ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ಭಾರತೀಯ ಒಲಿಂಪಿಕ್ ಸಂಘ | 21 |
| 31 | ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಮಾತ್ರ | ಭಾರತೀಯ ಒಲಿಂಪಿಕ್ ಸಂಘ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 20 |
| 32 | ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಮಾತ್ರ | ಭಾರತೀಯ ಒಲಿಂಪಿಕ್ ಸಂಘ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 19 |
| 33 | ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕಂಚಿನ ಪದಕ ಮಾತ್ರ | ಭಾರತೀಯ ಒಲಿಂಪಿಕ್ ಸಂಘ ಅಥವಾ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 18 |

Scanned with OKEN Scanner

| | | | |
|---|---|---|---|
| 34 | ಹಿರಿಯರ (ಪುರುಷ ಮತ್ತು ಮಹಿಳಾ) ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಮಾತ್ರ | ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 17 |
| 35 | ಹಿರಿಯರ (ಪುರುಷ ಮತ್ತು ಮಹಿಳಾ) ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಮಾತ್ರ | ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 16 |
| 36 | ಹಿರಿಯರ (ಪುರುಷ ಮತ್ತು ಮಹಿಳಾ) ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಮಾತ್ರ | ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಶನ್ | 15 |
| 37 | ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟ ಅಥವಾ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮೀಟ್ / ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಮಾತ್ರ | ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ (AIU) | 14 |
| 38 | ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ (AIU) | ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ (AIU) | 13 |
| 39 | ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟ ಅಥವಾ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮೀಟ್ / ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಮಾತ್ರ | ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯಗಳ ಸಂಘ (AIU) | 12 |

(ಸಿ) ಈ ಉಪನಿಯಮದಲ್ಲಿರುವ ಯಾವುದೂ ಕ್ರೀಡಾ ಸಾಧಕರಿಗೆ ಇತರೆ ನಿಯಮಗಳ ಅಡಿಯಲ್ಲಿ ನೇಮಕಾತಿಗೆ ಹೊಂದಲು ಯಾವುದೇ ನಿರ್ಬಂಧವಿರುವುದಿಲ್ಲ.

(ಡಿ) ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷ್ಯನ್ ಗೇಮ್ಸ್, ಏಷ್ಯನ್ ಪ್ಯಾರಾ ಗೇಮ್ಸ್ ಅಥವಾ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ಪಡೆದವರು "ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ಅಥವಾ ಏಷ್ಯನ್ ಗೇಮ್ಸ್ ಅಥವಾ ಏಷ್ಯನ್ ಪ್ಯಾರಾ ಗೇಮ್ಸ್ ಅಥವಾ ಕಾಮನ್‌ವೆಲ್ತ್

Scanned with OKEN Scanner

ಗೇಮ್ಸ್‌ನಲ್ಲಿ ಪದಕ ಪಡೆದ ವ್ಯಕ್ತಿಗಳ ನೇಮಕಾತಿ) (ವಿಶೇಷ) ನಿಯಮಗಳು, 2023" ಅಡಿಯಲ್ಲಿ ನೇಮಕಾತಿಯಾಗದಿದ್ದಲ್ಲಿ, ಅವರು ಈ ಉಪನಿಯಮದ ಅಡಿಯಲ್ಲಿ ನೇಮಕಾತಿ ಹೊಂದಬಹುದು.

(ಇ) ಕ್ರೀಡಾ ಸಾಧಕನು ಸಂಬಂಧಪಟ್ಟ ಸೇವೆ ಅಥವಾ ಇಲಾಖೆಯ ನೇಮಕಾತಿ ನಿಯಮಗಳಲ್ಲಿ ಅಂತಹ ಹುದ್ದೆಗೆ ನೇಮಕಾತಿಗಾಗಿ ನಿಗದಿಪಡಿಸಲಾದ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿದ್ದರೆ ಮಾತ್ರ ಆತನನ್ನು ಈ ಉಪ-ನಿಯಮದ ಅಡಿಯಲ್ಲಿನ ಹುದ್ದೆಗೆ ನೇಮಕಾತಿಗಾಗಿ ಪರಿಗಣಿಸತಕ್ಕದ್ದು.

(ಎಫ್) ಕ್ರೀಡಾ ಸಾಧಕನು ಖಂಡ (ಬಿ)ರ ಕೋಷ್ಟಕದ ಕಾಲಂ (2) ರಲ್ಲಿ ನಿರ್ದಿಷ್ಟಪಡಿಸಿದ ಒಂದಕ್ಕಿಂತ ಹೆಚ್ಚು ಸಾಧನೆಗಳನ್ನು ಹೊಂದಿರುವ ಸಂದರ್ಭದಲ್ಲಿ, ಅವನ ಅತ್ಯುನ್ನತ ಸಾಧನೆಯಲ್ಲಿ ಅವನು ಗಳಿಸಿದ ಕೃಪಾಂಕಗಳನ್ನು (Weightage Marks) ಪರಿಗಣಿಸತಕ್ಕದ್ದು.

(ಜಿ) ಯಾವುದೇ ಹುದ್ದೆಗೆ ಅನ್ವಯವಾಗುವ ನೇಮಕಾತಿ ನಿಯಮಗಳ ಪ್ರಕಾರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ, 2% ಕ್ರೀಡಾ ಕೋಟಾದ ಅಡಿಯಲ್ಲಿನ ಅಭ್ಯರ್ಥಿಗಳ ನಡುವಿನ ಪರಸ್ಪರ ಅರ್ಹತೆಯನ್ನು ನಿರ್ಧರಿಸಲು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ 50% ಅಂಕಗಳನ್ನು ಮತ್ತು ಸಂದರ್ಭಾನುಸಾರ ಖಂಡ (ಬಿ)ರ ಅಡಿಯಲ್ಲಿ ಅವನಿಗೆ ಲಭ್ಯವಿರುವ ಸಂಪೂರ್ಣ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಹೆಚ್) ಯಾವುದೇ ಹುದ್ದೆಗೆ ಅನ್ವಯವಾಗುವ ನೇಮಕಾತಿ ನಿಯಮಗಳ ಪ್ರಕಾರ ನೇಮಕಾತಿಗಾಗಿ ನಿಗದಿಪಡಿಸಲಾದ ಕನಿಷ್ಠ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ, 2% ಕ್ರೀಡಾ ಕೋಟಾದ ಅಡಿಯಲ್ಲಿನ ಅಭ್ಯರ್ಥಿಗಳ ನಡುವಿನ ಪರಸ್ಪರ ಅರ್ಹತೆಯನ್ನು ನಿರ್ಧರಿಸಲು ಪರೀಕ್ಷೆಯಲ್ಲಿ ಕ್ರೀಡಾ ಸಾಧಕ ಗಳಿಸಿದ ಒಟ್ಟು ಅಂಕಗಳ 50% ಅಂಕಗಳನ್ನು ಮತ್ತು ಸಂಧರ್ಭಾನುಸಾರ ಖಂಡ (ಬಿ)ರ ಅಡಿಯಲ್ಲಿ ಅವನಿಗೆ ಲಭ್ಯವಿರುವ ಸಂಪೂರ್ಣ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಐ) ವಿಕಲಚೇತನ ಅಭ್ಯರ್ಥಿಗಳ ಸಂದರ್ಭದಲ್ಲಿ, ಕ್ರೀಡಾ ಕೋಟಾದ ಅಡಿಯಲ್ಲಿ 2% ಮೀಸಲಾತಿಯು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಕಲಂ 33 ರಡಿಯಲ್ಲಿ ರಚಿಸಲಾದ ವಿಕಲಚೇತನರಿಗೆ ಮೀಸಲಿಡಬೇಕಾದ ಹುದ್ದೆಗಳನ್ನು ಗುರುತಿಸುವ ತಜ್ಞರ ಸಮಿತಿಯು ಗುರುತಿಸಿದ ಹುದ್ದೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

(ಜೆ) ಈ ಉಪ-ನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಸಾಮಾನ್ಯ ಸೂಚನೆಗಳನ್ನು ಹೊರಡಿಸಬಹುದು.

(ಕೆ) ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಕ್ಕೆ ಯಾವುದೇ ಅನುಮಾನ ಅಥವಾ ತೊಂದರೆ ಇದ್ದಲ್ಲಿ, ಅದು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರನ್ನು ಸಂಪರ್ಕಿಸಬಹುದು.

Scanned with OKEN Scanner

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(ಎಲ್) ಕ್ರೀಡಾ ಸಾಧಕರು ತಮ್ಮ ಸಾಧನೆಗಳಿಗೆ ಸಂಬಂಧಿಸಿದಂತೆ ಒದಗಿಸಿದ ಪ್ರಮಾಣಪತ್ರಗಳ ನೈಜತೆಯನ್ನು ನೇಮಕಾತಿ ಪ್ರಾಧಿಕಾರವು ಉಲ್ಲೇಖಿಸಿದರೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರು ದೃಢೀಕರಿಸತಕ್ಕದ್ದು.

(ಎಮ್) ಅಭ್ಯರ್ಥಿಗಳು ಸಮಾನ ಅಂಕಗಳನ್ನು ಗಳಿಸಿದ ಸಂದರ್ಭದಲ್ಲಿ, ತಂಡದ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರಿಗಿಂತ ವೈಯಕ್ತಿಕ ಭಾಗವಹಿಸುವಿಕೆಯ ಅಗತ್ಯವಿರುವ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರಿಗೆ ಆದ್ಯತೆ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆಶಾಕುಮಾರಿ ಎ. ಜೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು-1)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU Digitally signed by P S BASAVARAJU Date: 2026.10.03 19:15:43 +05'30'

Scanned with OKEN Scanner